ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

F.D.A & S.D.A ಹುದ್ದೆಗಳ ಪರೀಕ್ಷೆಗೆ ನಿಗಧಿಪಡಿಸಿದ ಹೆಚ್ಚಿನ ಶುಲ್ಕದ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

1245 (1559) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) KPSC ನಡೆಸುವ FDA ಮತ್ತು SDA(HK, Non-HK) ಹುದ್ದೆಗಳನ್ನು ಈ ಹಿಂದೆ ಒಂದೇ ಅಧಿಸೂಚನೆಯಲ್ಲಿ ನೇಮಕಾತಿಯನ್ನು ಮಾಡಿಕೊಳ್ಳುತ್ತಿದ್ದು, ಪ್ರಸ್ತುತ ವರ್ಷದಿಂದ HK ಮತ್ತು Non-HK ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಲು ಕಾರಣವೇನು ;

(ಆ) ಈ ಹುದ್ದೆಗಳಿಗಾಗಿ ಅಭ್ಯರ್ಥಿಗಳು ಎರಡೆರಡು ಬಾರಿ ಶುಲ್ಕ ಪಾವತಿಸಿ ಅರ್ಜಿಸಲ್ಲಿಸಬೇಕಾಗಿದ್ದು; ಒಂದೇ ಅಧಿಸೂಚನೆಯಲ್ಲಿ HK ಮತ್ತು , Non-HK ಹುದ್ದೆಗಳಿಗೆ ಅರ್ಜಿ ಕರೆಯಲು ಸರ್ಕಾರಕ್ಕಿರುವ ತೊಂದರೆ ಏನು;

(ಇ) ಅಲ್ಲದೇ ಈ ಹಿಂದೆ ಒಂದು ಪರೀಕ್ಷೆಗೆ 150 ರೂ ಶುಲ್ಕವನ್ನು ನಿಗಧಿಪಡಿಸಲಾಗಿತ್ತು, ಅದರೆ ಪ್ರಸ್ತುತ ವರ್ಷದಿಂದ HK ಮತ್ತು Non-HK ಹುದ್ದೆಗಳನ್ನು ನೇಮಕ ಮಾಡಲು ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಿದ್ದಲ್ಲದೇ, ಒಂದು ಪರೀಕ್ಷೆಗೆ 300 ರೂ. ಶುಲ್ಕವನ್ನು ನಿಗಧಿ ಮಾಡಲಾಗಿರುವುದರಿಂದ ಗ್ರಾಮೀಣ ಭಾಗದ ಬಡ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಏಕೆ ಕ್ರಮ ಕೈಗೊಂಡಿರುವುದಿಲ್ಲ ?